ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 17-11-1994

# *ಪ್ರತಿಯೊಂದು ಗುಣ ಅಥವಾ ಶಕ್ತಿಯ ಅನುಭವಗಳಲ್ಲಿ ಮುಳುಗಿಬಿಡುವುದು ಅರ್ಥಾತ್ ಅದೃಷ್ಟವಂತರಾಗುವುದು.*

(हर गुण व शक्ति के अनुभवों में खो जाना अर्थात् खुशनसीब बनना)

ಇಂದು ಪ್ರೇಮ ಸಾಗರನಾದ ಬಾಪ್‌ದಾದಾರವರು ತನ್ನ ಪ್ರೇಮ ಸ್ವರೂಪ ಮಕ್ಕಳೊಂದಿಗೆ ಮಿಲನ ಮಾಡುತ್ತಿದ್ದಾರೆ. ತಂದೆಯ ಪ್ರೀತಿಯೂ ಸಹ ಮಕ್ಕಳೊಂದಿಗೆ ಅನಂತವಾಗಿದೆ ಮತ್ತು ಮಕ್ಕಳ ಪ್ರೀತಿಯೂ ಸಹ ತಂದೆಯೊಂದಿಗೆ ಅನಂತವಾಗಿದೆ. ಈ ಪ್ರೀತಿಯ ಆಧಾರವೇ ಮಕ್ಕಳನ್ನೂ ಆಕರ್ಷಿಸುತ್ತಾ ಕರೆತರುತ್ತದೆ ಮತ್ತು ತಂದೆಯವರನ್ನೂ ಆಕರ್ಷಿಸುತ್ತಾ ಕರೆತರುತ್ತದೆ. ಮಕ್ಕಳಿಗೆ ಪರಮಾತ್ಮನ ಈ ಪ್ರೀತಿಯು ಎಷ್ಟು ಸುಖಕರವಾದುದು. ಒಂದುವೇಳೆ ಒಂದು ಸೆಕೆಂಡಿಗಾದರೂ ಈ ಪ್ರೀತಿಯಲ್ಲಿ ಮುಳುಗಿದರೂ ಅನೇಕ ದುಃಖಗಳನ್ನು ಮರೆತು, ಸುಖದ ಉಯ್ಯಾಲೆಯಲ್ಲಿ ತೂಗತೊಡಗುತ್ತೇವೆ ಎಂಬುದು ಗೊತ್ತಿದೆ. ಇಂತಹ ಅನುಭವ ಇದೆಯಲ್ಲವೇ? ಪ್ರಪಂಚದ ಲೆಕ್ಕದಿಂದ ಆತ್ಮರೆಷ್ಟು ಸಾಧಾರಣವಾಗಿದ್ದಾರೆ ಎಂಬುದನ್ನು ಬಾಪ್‌ದಾದಾರವರು ನೋಡುತ್ತಿದ್ದಾರೆ ಆದರೆ ಸಾಧಾರಣವಾಗಿದ್ದರೂ ಭಾಗ್ಯವೆಷ್ಟು ಶ್ರೇಷ್ಠವಾಗಿದೆ! ಅದು ಇಡೀ ಕಲ್ಪದಲ್ಲಿ. ಯಾವುದೇ ಧರ್ಮಾತ್ಮರೇ ಆಗಿರಬಹುದು, ಮಹಾನ್ ಆತ್ಮರೇ ಆಗಿರಬಹುದು ಆದರೆ ಇಂತಹ ಶ್ರೇಷ್ಠಭಾಗ್ಯವಂತೂ ಯಾರಿಗೂ ಪ್ರಾಪ್ತಿಯಾಗಲು ಸಾಧ್ಯವಿಲ್ಲ. ಅಂದರೆ ಅತಿ ಸಾಧಾರಣ ಮತ್ತು ಅತ್ಯಂತ ಶ್ರೇಷ್ಠ ಭಾಗ್ಯಶಾಲಿಗಳು. ಬಾಪ್‌ದಾದಾರವರಿಗೆ ಸಾಧಾರಣ ಆತ್ಮರೇ ಪ್ರಿಯವಾಗುವರು- ಏಕೆ? ಸ್ವತಹ ತಂದೆಯವರೂ ಸಹ ಸಾಧಾರಣ ತನುವಿನಲ್ಲಿಯೇ ಬರುತ್ತಾರೆ. ಯಾವುದೇ ರಾಜನ ತನುವಿನಲ್ಲಿ ಅಥವಾ ರಾಣಿಯ ತನುವಿನಲ್ಲಿ ಬರುವುದಿಲ್ಲ. ಅಥವಾ ಧರ್ಮಾತ್ಮನ ತನುವಿನಲ್ಲಿಯೋ, ಮಹಾತ್ಮನ ತನುವಿನಲ್ಲಿಯೋ ಬರುವುದಿಲ್ಲ. ಸಾಧಾರಣ ತನುವಿನಲ್ಲಿಯೇ ತಾನಾಗಿ ಬರುತ್ತಾರೆ ಮತ್ತು ಮಕ್ಕಳೂ ಸಹ ಸಾಧಾರಣವಾಗಿರುವವರೇ ಬರುತ್ತಾರೆ. ಇಂದಿನ ಕೋಟ್ಯಾಧಿಪತಿಯೂ ಸಹ ಸಾಧಾರಣವಾಗಿದ್ದಾರೆ. ಅವರಲ್ಲಿಯೇ ಭಾವನೆಯಿದೆ ಮತ್ತು ತಂದೆಯವರಿಗೂ ಭಾವನೆಯಿರುವವರು ಬೇಕು, ದೇಹದ ಪರಿವೆಯಿರುವವರಲ್ಲ. ಎಷ್ಟು ದೊಡ್ಡ(ಸಿರಿವಂತರು)ವರಾಗುತ್ತಾರೆಯೋ ಅಷ್ಟು ಭಾವನೆಯಿರುವುದಿಲ್ಲ ಆದರೆ ನಾನು ಇಂತಹವನೆಂಬ ಪರಿವೆಯಿರುತ್ತದೆ. ತಂದೆ ಭಾವನೆಗೆ ಫಲ ಕೊಡಬೇಕಾಗಿದೆ ಮತ್ತು ಭಾವನೆಯು ಸಾಧಾರಣ ಆತ್ಮರಲ್ಲಿಯೇ ಇರುತ್ತದೆ. ಪ್ರಸಿದ್ಧಮಟ್ಟದಲ್ಲಿರುವ ಆತ್ಮರ ಬಳಿ ಭಾವನೆಯೂ ಇಲ್ಲ. ಸಮಯವೂ ಇರುವುದಿಲ್ಲ. ಎಷ್ಟು ಸಾಧಾರಣರು ಮತ್ತು ಎಷ್ಟೊಂದು ಶ್ರೇಷ್ಠ ಭಾವನೆಯ ಫಲ ಪ್ರಾಪ್ತಿ ಮಾಡಿಕೊಳ್ಳುತ್ತಿದ್ದಾರೆ ಎಂದು ತಂದೆಯು ನೋಡುತ್ತಿದ್ದಾರೆ. ಆದ್ದರಿಂದ ಡ್ರಾಮಾನುಸಾರ ಸಂಗಮಯುಗದಲ್ಲಿ ಸಾಧಾರಣರಾಗುವುದೂ ಸಹ ಭಾಗ್ಯದ ಚಿಹ್ನೆಯಾಗಿದೆ. ಏಕೆಂದರೆ ಸಂಗಮದಲ್ಲಿಯೇ ಭಾಗ್ಯವಿದಾತನು ಭಾಗ್ಯದ ಶ್ರೇಷ್ಠ ರೇಖೆಯನ್ನು ಎಳೆಯುತ್ತಿದ್ದಾರೆ ಮತ್ತು

ಜೊತೆ-ಜೊತೆಗೆ ಭಾಗ್ಯದ ರೇಖೆಯನ್ನೆಳೆಯುವ ಲೇಖನಿಯನ್ನೂ ಮಕ್ಕಳಿಗೇ ಕೊಟ್ಟಿದ್ದಾರೆ. ಸಿಕ್ಕಿದೆಯಲ್ಲವೇ? ಭಾಗ್ಯದ ರೇಖೆಯನ್ನೆಳೆಯಲು ಬರುತ್ತದೆಯೇ? ಎಷ್ಟು ಉದ್ದನೆಯ ರೇಖೆಯನ್ನೆಳೆದಿದ್ದೀರಿ? ಚಿಕ್ಕಪುಟ್ಟದಾಗಿ ಎಳೆದಿಲ್ಲ ಅಲ್ಲವೇ? ಯಾರಿಗೆಷ್ಟು ಬೇಕೋ ಅಷ್ಟೂ ಭಾಗ್ಯವನ್ನು ರೂಪಿಸಿಕೊಳ್ಳಬಹುದು. ಎಲ್ಲರಿಗೂ ಅನುಮತಿಯಿದೆ. ಎಲ್ಲರಿಗೂ ನಿಮಂತ್ರಣವಿದೆ. ಭಲೆ ಹೊಸಬರಾಗಿರಬಹುದು. ಹಳಬರೇ ಆಗಿರಬಹುದು. ಸಪ್ತಾಹದ ಕೋರ್ಸ್ ಮಾಡಿರುವವರಾಗಿರಬಹುದು, ತಂದೆಯನ್ನು ಗುರುತಿಸಿದಿರಿ ಮತ್ತು ತಂದೆಯು ಭಾಗ್ಯದ ಲೇಖನಿಯನ್ನು ಕೊಟ್ಟುಬಿಡುತ್ತಾರೆ- ಇದೇ ಪರಮಾತ್ಮನ ಪ್ರೀತಿಯಾಗಿದೆ. ಪ್ರೀತಿಯ ಸಂಕೇತವೇನಾಗಿರುತ್ತದೆ? ಜೀವನದಲ್ಲಿ ಏನು ಬೇಕೋ ಅದೇನ್ನೇನಾದರೂ ಯಾರೇ ಯಾರಿಗೇ ಕೊಟ್ಟರೂ ಅದೇ ಪ್ರೀತಿಯ ಸಂಕೇತವಾಗಿದೆ. ಹಾಗಾದರೆ ತಂದೆಯ ಪ್ರೀತಿಯ ಚಿಹ್ನೆಯಾಗಿದೆ- ಜೀವನದಲ್ಲಿ ಏನು ಬೇಕೋ ಆ ಸರ್ವ ಕಾಮನೆಗಳೆಲ್ಲವನ್ನೂ ಪೂರ್ಣಗೊಳಿಸುತ್ತಾರೆ. ಸುಖ-ಶಾಂತಿಯು ಬೇಕಲ್ಲವೇ! ಒಂದುವೇಳೆ ಒಬ್ಬರಿನ್ನೊಬ್ಬರಿಗೆ ಯಾವುದೇ ವಸ್ತುವನ್ನು ಕೊಟ್ಟರೆ ಅದರಿಂದ ಸುಖ ಸಿಗುತ್ತದೆ ಅಲ್ಲವೇ? ಹಾಗಾದರೆ ತಂದೆಯವರು ಸುಖವನ್ನೇನು, ತಮ್ಮೆಲ್ಲರನ್ನೂ ಸುಖದ ಭಂಡಾರವನ್ನಾಗಿಯೇ ಮಾಡಿಬಿಡುತ್ತಾರೆ. ಸುಖದ ಭಂಡಾರವಾಗಿದ್ದೀರಲ್ಲವೆ! ಸಂಪೂರ್ಣವಾಗಿ ಸಂಗ್ರಹಣೆ ಆಗಿದೆಯೇ ಅಥವಾ ಒಂದು ಕೊಠಡಿ. ಎರಡು ಕೊಠಡಿಯಷ್ಟಿದೆಯೇ! ಭಂಡಾರವೇ ಇದೆ. ಹೇಗೆ ತಂದೆಯು ಸುಖದ ಸಾಗರನಾಗಿದ್ದಾರೆ. ನದಿ ಅಥವಾ ಬಾವಿಯಲ್ಲ, ಸಾಗರನಾಗಿದ್ದಾರೆ ಅಂದಮೇಲೆ ತಂದೆಯ ಮಕ್ಕಳಾದ ನಿಮ್ಮನ್ನೂ ಸುಖದ ಭಂಡಾರದ ಮಾಲೀಕರನ್ನಾಗಿ ಮಾಡಿಬಿಡುತ್ತಾರೆ. ಸುಖದ ಯಾವುದೇ ಕೊರತೆಯಿದೆಯೇ? ಯಾವುದಾದರೂ ಅಪ್ರಾಪ್ತಿಯಿದೆಯೇ? ಆಮೇಲೆ ಸ್ವಲ್ಪ ಶಕ್ತಿ ಕೊಡಿ! ಕೊಟ್ಟಿದ್ದೇವೆ ಅದಕ್ಕೇ ಕೊಡಿ ಕೊಡಿ ಎಂದು ಹೇಳುವ ಅವಶ್ಯಕತೆಯೇ ಇಲ್ಲ. ತಂದೆಯವರು ಕೊಟ್ಟಿದ್ದಾರೆ. ಅದನ್ನು ಕೇವಲ ಕಾರ್ಯದಲ್ಲಿ ಉಪಯೋಗಿಸುವ ವಿಧಿ ಬರಬೇಕು ಮತ್ತು ಆ ವಿಧಿಯೂ ಸಹ ಅನೇಕ ಪ್ರಕಾರವಾಗಿ ತಂದೆಯ ಮೂಲಕವೇ ಸಿಕ್ಕಿರುತ್ತದೆ. ಅದನ್ನು ಕೇವಲ ಸಮಯಾನುಸಾರ ಕಾರ್ಯರೂಪದಲ್ಲಿ ಉಪಯೋಗಿಸುತ್ತಿಲ್ಲ ಆದ್ದರಿಂದ ಇದ್ದರೂ ಸಹ ಅದರ ಲಾಭ ಪಡೆಯಲು ಸಾಧ್ಯವಾಗುವುದಿಲ್ಲ. ಎಷ್ಟೊಂದು ಶ್ರೇಷ್ಠ ಭಾಗ್ಯವಿದೆ! ಮತ್ತು ಎಷ್ಟೊಂದು ಸಹಜವಾಗಿ ಸಿಕ್ಕಿರುವುದಾಗಿದೆ ಏನಾದರೂ ಕಷ್ಟದಿಂದ ಸಿಕ್ಕಿದೆಯೇ? ಒಂದು ಕಾಲಿನ ಮೇಲೆ ನಿಲ್ಲಲಿಲ್ಲ ಅಥವಾ ಸೆಕೆಂಡಿನ ದರ್ಶನಕ್ಕಾಗಿ ದರ್ಶನದ ಕ್ಯೂನಲ್ಲಿ ನಿಂತಿರಲಿಲ್ಲ ಅಲ್ಲವೆ! ಆರಾಮವಾಗಿ ಕುಳಿತಿದ್ದೀರಲ್ಲವೆ ಕೆಳಗೆ ಹಾಸಿಗೆಯ ಮೇಲೆ ಕುಳಿತಿದ್ದೀರಿ ಆರಾಮವಾಗಿಯೇ ಸಹಜ ಶ್ರೇಷ್ಠ ಭಾಗ್ಯವನ್ನು ರೂಪಿಸಿಕೊಂಡಿದ್ದೀರಿ. ಇಷ್ಟು ನಶೆಯಿದೆಯಲ್ಲವೇ? ಎಲ್ಲರೂ ನಶೆಯಿಂದ ಹೇಳುತ್ತಾರೆ- ಭಾಗ್ಯ ವಿದಾತಾ ನಮ್ಮ ತಂದೆಯಾಗಿದ್ದಾರೆ. ಯಾವಾಗ ಭಾಗ್ಯ ವಿದಾತಾ ತಮ್ಮವರಾಗಿಬಿಟ್ಟರು ಅಂದಮೇಲೆ ಭಾಗ್ಯವನ್ನು ಯಾರಿಗೆ ಕೊಡುವರು?

ಭಾಗ್ಯವಿದಾತನನ್ನು ತಮ್ಮವರನ್ನಾಗಿ ಮಾಡಿಕೊಳ್ಳುವುದು ಅಂದರೆ ಭಾಗ್ಯದ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳಲಾಯಿತು ಯಾರಿಗೆ ನಶೆಯಿದೆಯೋ ಅವರು ಸದಾ ಇದೇ ಅನುಭವ ಮಾಡುತ್ತಾರೆ- ನನ್ನ ಭಾಗ್ಯವಾಗದಿದ್ದರೆ ಮತ್ಯಾರದಾಗುವುದು? ಏಕೆಂದರೆ ಭಾಗ್ಯ ವಿದಾತನೇ ನನ್ನವದಾಗಿದ್ದಾರೆ. ಇನ್ನೂ ನಶೆಯಿದೆಯೇ ಅಥವಾ ಕೆಲವೊಮ್ಮೆ ಏರಿಳಿತವಾಗುವುದೇ? ಸಂಗಮದ ಸಮಯವೇ ಎಷ್ಟೊಂದು ಚಿಕ್ಕದಾಗಿರುವುದು ಮತ್ತು ತಾವು ಮೆಜಾರಿಟಿಯಲ್ಲಿ ಎಲ್ಲರೂ

ಹೊಸಬರಾಗಿದ್ದೀರಿ. ಇಷ್ಟು ಸ್ವಲ್ಪ ಸಮಯವೇ ಸಿಕ್ಕಿದೆ! ಆದರೆ ಡ್ರಾಮಾದಲ್ಲಿ ವಿಶೇಷವಾಗಿ ಈ ಸಂಗಮಯುಗದ ವಿಶೇಷತೆಯೇ ಇದಾಗಿದೆ- ಯಾರೇ ಹೊಸಬರಿರಲಿ ಅಥವಾ ಹಳಬರಿರಲಿ, ಹೊಸಬರಿಗೂ ಮುಂದುವರೆಯುವ ಸುವರ್ಣಾವಕಾಶವಿದೆ ಅಂದಮೇಲೆ ಹೊಸಬರಲ್ಲಿ ಉತ್ಸಾಹವಿದೆಯೇ ಅಥವಾ ನಮಗಿಂತಲೂ ಮುಂದೆ ಬಹಳಷ್ಟಿದ್ದಾರೆ. ನಾವಂತು ಬಂದಿರುವುದೇ ಈಗ ಎಂದು ತಿಳಿಯುತ್ತಿದ್ದೀರಾ! ಯಾರೆಷ್ಟು ಮುಂದುವರೆಯಬೇಕೋ ಅಷ್ಟೊ ಮುಂದುವರೆಯಬಹುದು. ಎಲ್ಲರಿಗೂ ಅನುಮತಿಯಿದೆ. ಇದರಲ್ಲಿ ಕೇವಲ ಅಭ್ಯಾಸದ ಮೇಲೆ ಗಮನವಿರಬೇಕು ಅಷ್ಟೇ. ಕೆಲಕೆಲವರು ಹಳಬರು ಹುಡುಗಾಟಿಕೆಯಲ್ಲಿ ಬಂದುಬಿಡುತ್ತಾರೆ ಮತ್ತು ತಾವು ಹೊಸಬರು ಆ ರೀತಿಯಿಲ್ಲದಿದ್ದರೆ ಮುಂದುವರೆಯಬಹುದು, ಅಂಕಗಳನ್ನೂ ಪಡೆಯುತ್ತೀರಿ. ಅಂಕಗಳನ್ನು ಪಡೆಯಬೇಕಲ್ಲವೇ? ಮೊದಲ ನಂಬರ್ ಅಲ್ಲ. ಮೊದಲ ದರ್ಜೆಯಲ್ಲಿ ಬರಬೇಕು, ಮೊದಲ ನಂಬರಿನವರಂತು ಬ್ರಹ್ಮಾತಂದೆಯವರದು ನಿಶ್ಚಿತವಾಗಿಬಿಟ್ಟದೆ ಅಲ್ಲವೆ ಆದರೆ ಮೊದಲ ದರ್ಜೆಯಲ್ಲಿ ಯಾರು ಬೇಕಾದರೂ ಬರಬಹುದು ಹಾಗಾದರೆ ಎಲ್ಲರೂ ಯಾವ ದರ್ಜೆಯಲ್ಲಿ ಬರುತ್ತೀರಿ? ಎಲ್ಲರೂ ಮೊದಲ ದರ್ಜೆಯಲ್ಲಿ ಬಂದುಬಿಟ್ಟರೆ ಎರಡನೆಯದರಲ್ಲಿ ಯಾರು ಬರುವರು? ಮಾತೆಯರು ಯಾವುದರಲ್ಲಿ ಬರುವಿರಿ? ಮೊದಲ ದರ್ಜೆಯಲ್ಲಿ ಬರುವಿರಾ? ಬಹಳ ಒಳ್ಳೆಯದು- ಬರಲೇಬೇಕು ಎನ್ನುವ ಧೃಡ ನಿಶ್ಚಯವು ಭಾಗ್ಯವನ್ನು ನಿಶ್ಚಿತ ಮಾಡಿಬಿಡುತ್ತದೆ. ಗೊತ್ತಿಲ್ಲ... ಬರುತ್ತೇವೆಯೋ ಅಥವಾ ಬರುವುದಿಲ್ಲವೋ.... ಗೊತ್ತಿಲ್ಲ ಮುಂದೆ ನಡೆದಂತೆ ಮಾಯೆಯೇನಾದರೂ ಬಂದುಬಿಟ್ಟರೆ.. ಮಾಯೆ ಬಹಳ ಚತುರನಾಗಿದೆ... ಇಂತಹ ವ್ಯರ್ಥ ಸಂಕಲ್ಪವನ್ನೆಂದಿಗೂ ಮಾಡಬಾರದು. ಯಾವಾಗ ಸರ್ವಶಕ್ತಿವಂತನೇ ಜೊತೆಗಿದ್ದಾರೆ ಅಂದಮೇಲೆ ಅವರ ಮುಂದೆ ಮಾಯೆಯು ಕಾಗದದ ಹುಲಿಯಾಗಿದೆ ಆದ್ದರಿಂದ ಗಾಬರಿಯಾಗಬಾರದು. 'ಗೊತ್ತಿಲ್ಲ' ಈ ಸಂಕಲ್ಪವನ್ನೆಂದಿಗೂ ಮಾಡಬಾರದು. ಮಾಸ್ಟರ್ ಜ್ಞಾನಪೂರ್ಣನಾಗಿದ್ದು ಪ್ರತಿಯೊಂದು ಕರ್ಮವನ್ನು ಮಾಡುತ್ತಾ ಮುಂದುವರೆಯಿರಿ. ಜೊತೆಯ ಅನುಭವವು ಸದಾಕಾಲ ಸಹಜ ಮತ್ತು ಸುರಕ್ಷಿತವಾಗಿ ಇಡುತ್ತದೆ. ಮರೆಯುತ್ತೀರೆಂದರೆ ಕಷ್ಟವಾಗಿಬಿಡುತ್ತದೆ. ಆದರೆ ಎಲ್ಲರ ಪ್ರತಿಜ್ಞೆಯಿದೆ- ಜೊತೆ ಇರುತ್ತೇವೆ. ಜೊತೆ ನಡೆಯುತ್ತೇವೆ ಎಂಬ ಪ್ರತಿಜ್ಞೆ ಇದೆಯಲ್ಲವೇ? ಅಥವಾ ಒಂಟಿ ಆಗಿರುತ್ತೇವೆ. ಒಂಟಿಯಾಗಿ ಹೋಗುತ್ತೇವೆ ಎನ್ನುವುದಿದೆಯೇ? ಹಾಗಾದರೆ ಜೊತೆಯ ಅನುಭವವನ್ನು ವೃದ್ಧಿ ಮಾಡಿಕೊಳ್ಳಿರಿ. ಜೊತೆಯಿದ್ದೇವೆ ಎನ್ನುವುದನ್ನೂ ತಿಳಿದಿದ್ದೀರಿ, ಅವಶ್ಯವಾಗಿ ಒಪ್ಪಿಕೊಳ್ಳುತ್ತೀರಿ ಆದರೆ ಅಂತರವೇನಾಗುತ್ತದೆ? ಎಲ್ಲಾ ಗೊತ್ತಿದ್ದರೂ, ಒಪ್ಪಿಕೊಂಡಿದ್ದರೂ ಸಮಯಾನುಸಾರ ನಡೆಯುವುದಿಲ್ಲ. ಮಾಯೆಯ ಶಕ್ತಿಯ ಫೋರ್ಸ್‌ಅನ್ನು ಮರೆತುಬಿಡುತ್ತೀರಿ. ಆದರೆ ಮಾಯೆಯು ಬಹಳ ಶಕ್ತಿಶಾಲಿಯೇ? ಅದು ಶಕ್ತಿಶಾಲಿಯೇ ಅಥವಾ ತಾವು ಶಕ್ತಿಶಾಲಿಗಳೇ? ಅಥವಾ ಕೆಲವೊಮ್ಮೆ ಮಾಯೆ ಬಲಶಾಲಿ, ಕೆಲವೊಮ್ಮೆ ತಾವು ಬಲಶಾಲಿಗಳೇ? ತಮ್ಮ ಬಲಹೀನತೆ ಮಾಯೆಯಾಗಿದೆ ಮತ್ತೇನೂ ಇಲ್ಲ. ತಮ್ಮ ಬಲಹೀನತೆಯೇ ಮಾಯೆಯಾಗಿ ತಮ್ಮಮುಂದೆ ಬರುತ್ತದೆ ಅಷ್ಟೇ. ಹೇಗೆ ಶರೀರದ ಬಲಹೀನತೆಯು ರೋಗವಾಗಿ ತಮ್ಮಮುಂದೆ ಬರುತ್ತದೆ ಅಲ್ಲವೆ. ಅದೇರೀತಿ ಆತ್ಮದ ಬಲಹೀನತೆಯು ಮಾಯೆಯಾಗಿ ಯುದ್ಧ ಮಾಡುತ್ತದೆ. ಹಾಗಾದರೆ ಬಲಹೀನರೂ ಆಗಬಾರದು. ಮಾಯೆಯೂ ಬರಬಾರದು. ಲಕ್ಷ್ಯವೇ ಮಾಯಾಜೀತ್ ಜಗತ್ಜೀತ್ ರಾಗುವುದಾಗಿದೆ. ಎಷ್ಟು ಬಾರಿ ವಿಜಯಿಗಳಾಗಿದ್ದೀರಿ? ಲೆಕ್ಕವಿಲ್ಲದಷ್ಟು ಬಾರಿ ವಿಜಯಿಯಾಗಿದ್ದರೂ ಗಾಬರಿಯಾಗುತ್ತೀರಾ? ಹೊಸಮಾತಾಗಿದ್ದರೆ ಹೊಸದಾಗಿತ್ತು. ನನಗೆ ಗೊತ್ತಾಗಲಿಲ್ಲ ಆದ್ದರಿಂದ ಗಾಬರಿಯಾದೆನು ಎಂದು ಹೇಳುತ್ತಾರೆ. ಆದರೆ ಒಂದುಕಡೆ ಅನೇಕಬಾರಿಯ ವಿಜಯಿಗಳೆಂದು

ಹೇಳುತ್ತೀರಿ. ಮತ್ತೇಕೆ ಗಾಬರಿಯಾಗುತ್ತೀರಿ? ತಂದೆಯವರ ಪ್ರೀತಿಯೇ ಇದಾಗಿದೆ- ಪ್ರತಿಯೊಂದು ಮಗು ಶ್ರೇಷ್ಠ ಆತ್ಮನಾಗಿ ರಾಜ್ಯಾಧಿಕಾರಿ ಆಗಲಿ ಪ್ರಜಾ ಅಧಿಕಾರಿಯಂತು ಆಗಬಾರದು ಅಲ್ಲವೇ? ಹಾಗಾದರೆ ರಾಜ್ಯಾಧಿಕಾರಿಯ ಅರ್ಥ ಪ್ರತಿಯೊಂದು ಕರ್ಮೇಂದ್ರಿಯಗಳ ಮೇಲೆ ವಿಜಯಿ. ಒಂದುವೇಳೆ ತಮ್ಮ ಕರ್ಮೇಂದ್ರಿಯಗಳ ಮೇಲೆ, ಮನಸ್ಸು-ಬುದ್ಧಿ-ಸಂಸ್ಕಾರದ ಮೇಲೆ ವಿಜಯಿಯಾಗದಿದ್ದರೆ ಪ್ರಜೆಗಳ ಮೇಲೆ ರಾಜ್ಯಾಡಳಿತವನ್ನು ಹೇಗೆ ಮಾಡುವಿರಿ! ಒಂದುವೇಳೆ ತನ್ನಮೇಲೆಯೇ ವಿಜಯವನ್ನು ಪಡೆಯುವುದಕ್ಕೆ ಸಾಧ್ಯವಾಗದೇ ಇರುವಂತಹ ರಾಜರಾದರೆ, ಸತ್ಯಯುಗವೂ ಕಲಿಯುಗವಾಗಿ ಬಿಡುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಿರಿ- ಮನಸ್ಸು-ಬುದ್ಧಿ-ಸಂಸ್ಕಾರವು ನಿಯಂತ್ರಣದಲ್ಲಿದೆಯೇ? ಮನಸ್ಸು ತಮ್ಮ ಮೇಲೆ ಆಡಳಿತ ನಡೆಸುತ್ತದೆಯೇ ಅಥವಾ ತಾವು ಮನಸ್ಸನ್ನು ನಡೆಸುವವರೇ? ಇಂದು ನನ್ನ ಮನಸ್ಸು ಸರಿಯಿಲ್ಲ, ಅಲೆದಾಡುತ್ತಿದೆ ಎಂದು ದೂರು ಕೊಡುವವರು ಮನಜೀತರಾಗಿರುವವರೇ? ಇಂದು ಮನಸ್ಸು ಬೇಸರವಾಗಿದೆ. ಇಂದು ಮನಸ್ಸು ಅನ್ಯ ಆಕರ್ಷಣೆಯ ಕಡೆ ಹೋಗುತ್ತಿದೆ. ಇದು ವಿಜಯಿ ಆತ್ಮರ ಸಂಕಲ್ಪವೇ? ಹಾಗಾದರೆ ಯಾರಿಗೆ ಸ್ವಯಂನಮೇಲೆ ವಿಜಯ ಪಡೆಯಲು ಸಾಧ್ಯವಿಲ್ಲವೋ ಅವರು ವಿಶ್ವದ ಮೇಲೆ ವಿಜಯವನ್ನು ಹೇಗೆ ಪ್ರಾಪ್ತಿ ಮಾಡಿಕೊಳ್ಳುವರು? ಆದ್ದರಿಂದ ಎಲ್ಲಿಯವರೆಗೆ  ಕರ್ಮೇಂದ್ರಿಯಗಳ ಮೇಲೆ ವಿಜಯಿ, ಮನಸ್ಸಿನ ಮೇಲೆ ವಿಜಯಿ ಆಗಿದ್ದೇನೆ ಎಂದು ಪರಿಶೀಲನೆ ಮಾಡಿಕೊಳ್ಳಿರಿ. ಒಂದುವೇಳೆ ಮೊದಲ ದರ್ಜೆಯಲ್ಲಿ ಬರಬೇಕೆಂದರೆ ಈ ಲಕ್ಷಣದಿಂದ ಲಕ್ಷ್ಯವನ್ನು ಪ್ರಾಪ್ತಿ ಮಾಡಿಕೊಳ್ಳಬಹುದು.

ಬಾಪ್‍ದಾದಾರವರು ನೋಡಿದರು- ಮಕ್ಕಳು ಉತ್ಸಾಹ ಉಲ್ಲಾಸದಲ್ಲಿಯೂ ಇರುತ್ತಾರೆ. ಜ್ಞಾನಿ ಜೀವನವೂ ಇಷ್ಟವಾಗುತ್ತದೆ. ಜ್ಞಾನವನ್ನು ಕೇಳುವುದು ಹಾಗೂ ತಿಳಿಸುವುದರಲ್ಲಿಯೂ ಬಹಳ ಮುಂದುವರೆಯುತ್ತಿದ್ದಾರೆ ಆದರೆ ಮುಂದೆಸಾಗುತ್ತಾ ಸಾಗುತ್ತಾ ಬಲಹೀನತೆಯೇನಾದರೂ ಬಂದರೆ, ಅದರ ಕಾರಣವೇನು? ವಿಶೇಷ ಕಾರಣವಿದೆ- ಏನು ಹೇಳುತ್ತೀರಿ. ಏನು ಕೇಳಿಸಿಕೊಳ್ಳುತ್ತೀರಿ. ಆ ಒಂದೊಂದು ಗುಣ. ಶಕ್ತಿ, ಜ್ಞಾನದ ಬಿಂದುಗಳ ಅನುಭವ ಕಡಿಮೆಯಿದೆ. ಉದಾ: ಇಡೀ ದಿನದಲ್ಲಿ ಅಥವಾ ಅನ್ಯರಿಗೂ ಸಹ ಎಷ್ಟೊಂದು ಬಾರಿ ಹೇಳುತ್ತೀರಿ- ನಾನು ಆತ್ಮನಾಗಿದ್ದೇನೆ. ತಾವು ಆತ್ಮನಾಗಿದ್ದೀರಿ, ಶಾಂತ ಸ್ವರೂಪ ಆಗಿದ್ದೀರಿ, ಸುಖ ಸ್ವರೂಪ ಆಗಿದ್ದೀರಿ, ಎಷ್ಟೊಂದು ಬಾರಿ ತಾವೂ ಸಹ ಚಿಂತನೆ ಮಾಡುತ್ತೀರಿ ಮತ್ತು ಅನ್ಯರಿಗೂ ಹೇಳುತ್ತೀರಿ ಆದರೆ ನಡೆಯುತ್ತಾ-ಸುತ್ತಾಡುತ್ತಾ ಆತ್ಮಿಕ ಅನುಭವ, ಜ್ಞಾನ ಸ್ವರೂಪ, ಪ್ರೇಮ ಸ್ವರೂಪ. ಶಾಂತ ಸ್ವರೂಪದ ಅನುಭೂತಿಯ ಕೊರತೆಯಾಗುತ್ತದೆ. ಕೇಳುವುದು ಮತ್ತು ಹೇಳುವುದು ಬಹಳಷ್ಟಿರುತ್ತದೆ. ಅನುಭೂತಿ ಕಡಿಮೆಯಿದೆ ಆದರೆ ಎಲ್ಲದಕ್ಕಿಂತಲೂ ಶ್ರೇಷ್ಠ ಅಧಿಕಾರವು ಅನುಭವದ್ದಾಗಿರುತ್ತದೆ. ಅಂದಮೇಲೆ ಆ ಅನುಭವಗಳಲ್ಲಿ ಮುಳುಗಿಬಿಡಿ. ಯಾವಾಗ ಶಾಂತ ಸ್ವರೂಪ ಎಂದು ಹೇಳುತ್ತೀರಿ. ಆ ಸ್ವರೂಪದಲ್ಲಿ ತಮಗೂ ಹಾಗೂ ಅನ್ಯರಿಗೂ ಶಾಂತಿಯ ಅನುಭೂತಿಯಾಗಲಿ, ಒಂದೊಂದು ಗುಣದ ವರ್ಣನೆ ಮಾಡುತ್ತೀರಿ. ಶಕ್ತಿಗಳ ವರ್ಣನೆ ಮಾಡುತ್ತೀರಿ ಆದರೆ ಶಕ್ತಿ ಅಥವಾ ಗುಣಗಳು ಸಮಯಾನುಸಾರ ಅನುಭವದಲ್ಲಿ ಬರಲಿ. ಕೆಲವರಂತು ಸಹನೆಶಕ್ತಿಯನ್ನು ಧಾರಣೆ ಮಾಡಿಕೊಳ್ಳಬೇಕು. ಅದು ಒಳ್ಳೆಯದು ಎಂದು ಹೇಳುತ್ತಿರುತ್ತಾರೆ ಆದರೆ ಅನುಭೂತಿ ಆಗುವುದಿಲ್ಲ. ಅನುಭೂತಿಯ ಕೊರತೆಯಿರುವ ಕಾರಣ ಎಷ್ಟು ಬಯಸುತ್ತೀರೋ ಅಷ್ಟು ಪಡೆಯಲು ಸಾಧ್ಯವಾಗುವುದಿಲ್ಲ. ಪುರುಷಾರ್ಥವೆಷ್ಟು ಇರಬೇಕು ಅಷ್ಟಿದೆಯೇ? ಎಂದಾದರೂ

ಎಲ್ಲರೊಂದಿಗೆ ಕೇಳಿದರೆ ಸ್ವಲ್ಪಮಂದಿ ಹೌದು ಎಂದು ಹೇಳುವರು. ಅಂದಾಗ ಎಷ್ಟು ಸಿಗುತ್ತಿದೆಯೋ ಅಷ್ಟು ಜೀವನದಲ್ಲಿ ಅಥವಾ ಕರ್ಮದಲ್ಲಿ ಅನುಭವವಾಗಬೇಕು. ಕೇವಲ ಚಿಂತನೆ ಮಾಡುವುದರಲ್ಲಿ ಅನುಭವವಲ್ಲ ಆದರೆ ಚಲನೆಯಲ್ಲಿ, ಕರ್ಮದಲ್ಲಿಯೂ ಶಕ್ತಿಗಳ, ಗುಣಗಳ ಅನುಭವವು ತಮಗೂ ಆಗಬೇಕು. ಅನ್ಯರಿಗೂ ಅನುಭವವಾಗಬೇಕು. ಜ್ಞಾನ ಸ್ವರೂಪವೆಂದು ಹೇಳಿದಾಗ, ಆ ಸ್ವರೂಪವು ಕಾಣಿಸಬೇಕಲ್ಲವೇ? ಹಾಗೆಯೇ ಸ್ವರೂಪವು ಸದಾಕಾಲ ಇರುತ್ತದೆ. ಕೆಲಕೆಲವೊಮ್ಮೆ ಇರುವುದಿಲ್ಲ. ಅಜ್ಞಾನಕಾಲದಲ್ಲಿಯೂ ಯಾರಾದರೂ ಅವರ ಜೀವನದಲ್ಲಿ ಕ್ರೋಧಸ್ವರೂಪರಾಗಿದ್ದರೆ. ಯಾವುದಾದರೂ ಮಾತು ಬಂದಾಗ ಆ ಸ್ವರೂಪವು ಕಾಣಿಸುತ್ತದೆ. ಗುಪ್ತವಾಗಿರುವುದಿಲ್ಲ. ಭಲೆ ಚಿಕ್ಕವಿಷಯವೇ ಆಗಿರಲಿ ಅಥವಾ ದೊಡ್ಡ ವಿಷಯ ಆದರೆ ಯಾರ ಸ್ವರೂಪವೇನಾಗಿರುವುದೋ ಅದು ಕಾಣಿಸುತ್ತದೆ. ತಮಗೂ ಅನುಭವವಾಗುವುದು ಮತ್ತು ಅನ್ಯರಿಗೂ ಅನುಭವವಾಗುವುದು. ಆಗ ಏನು ಹೇಳುವರು- ಇವರಿರುವುದೇ ಕ್ರೋಧಿ. ಇವರ ಸಂಸ್ಕಾರವೇ ಕ್ರೋಧದ ಸಂಸ್ಕಾರವಾಗಿದೆ. ಹೇಗಾದರೆ ಸಂಸ್ಕಾರವು ಕಾಣಿಸುತ್ತದೆಯೋ ಅದೇರೀತಿ ಈ ಜ್ಞಾನ ಸ್ವರೂಪ, ಶಾಂತ ಸ್ವರೂಪ, ಸುಖ ಸ್ವರೂಪವೂ ಅನುಭವದಲ್ಲಿ ಬರಲಿ. ಇದರಲ್ಲಿ ಅನುಭವಿಮೂರ್ತಿಯಾಗಿ ಇದು ಶ್ರೇಷ್ಠ ಪುರುಷಾರ್ಥದ ಚಿಹ್ನೆಯಾಗಿದೆ. ಹಾಗಾದರೆ ಅನುಭವವನ್ನು ಹೆಚ್ಚಿಸಿಕೊಳ್ಳಿ ಏನು ಹೇಳಿದಿರಿ ಅದರ ಅನುಭವ ಮಾಡಿದ್ದಿರಾ? ಒಂದುವೇಳೆ ಅನುಭವವಾಗದಿದ್ದರೆ ಅದರ ಕಾರಣ ಇದೇ ಆಗಿದೆ ಸಮಯಾನುಸಾರ ಯಾವ ವಿಧಿಯು ಸಿಗುತ್ತದೆಯೋ ಅದರಲ್ಲಿ ಗಮನ ಕಡಿಮೆಯಿದೆ ಜ್ಞಾನವನ್ನು, ಶಕ್ತಿಗಳನ್ನು, ಗುಣಗಳನ್ನೆಷ್ಟು ಪುನರಾವರ್ತನೆ ಮಾಡುತ್ತಾ ಇರುತ್ತೀರೋ ಅಷ್ಟು ಅನುಭವವೂ ಸಹಜವಾಗುವುದು. ಪುನರಾವರ್ತನೆ ಕಡಿಮೆಯಾದರೆ ಅನುಭವವೂ ಕಡಿಮೆಯಾಗುವುದು. ಕೇಳಿದೆವು. ಬಹಳ ಚೆನ್ನಾಗಿದೆ ಅಷ್ಟೇ ಆದರೆ ನಡೆಯುತ್ತಾ-ವ್ಯವಹಾರದಲ್ಲಿ ಬರುತ್ತಾ ಪುನರಾವರ್ತನೆ ಆಗಬೇಕು. ಹೇಗೆ ಪ್ರಪಂಚದವರು ಹೇಳುತ್ತಾರೆ- ಕರ್ಮವೇ ಯೋಗವಾಗಿದೆ. ಕರ್ಮ ಮತ್ತು ಯೋಗವನ್ನು ಬೇರೆ-ಬೇರೆ ಎಂದು ಒಪ್ಪುವುದಿಲ್ಲ. ಕರ್ಮವೇ ಯೋಗವಾಗಿದೆ. ಕರ್ಮದೊಂದಿಗೆ ಯೋಗವನ್ನಿಡುವುದೇ ಕರ್ಮಯೋಗವೆಂದು ತಿಳಿಯುತ್ತಾರೆ. ಆದರೆ ಕರ್ಮ ಮತ್ತು ಯೋಗ ಎರಡರ ಸಮತೋಲನವಿರಬೇಕು. ಕರ್ಮದಲ್ಲಿ ವ್ಯಸ್ತವಾಗಿರುವುದು ಯೋಗವಲ್ಲ. ಕರ್ಮವನ್ನು ಮಾಡುತ್ತಾ ಯೋಗದ ಅನುಭವವಾಗಬೇಕು. ಕರ್ಮದಲ್ಲಿ ವ್ಯಸ್ತರಾದರೆ ಕರ್ಮವೇ ಶ್ರೇಷ್ಠವಾಗುವುದು, ಯೋಗವು ದೂರವಾಗಿಬಿಡುತ್ತದೆ. ಮುಂದುವರೆಯುತ್ತಾ ಇದೇ ಹುಡುಗಾಟಿಕೆಯೂ ಬರುತ್ತದೆ. ಅಂದಮೇಲೆ ಕರ್ಮದಲ್ಲಿ ಯೋಗದ ಅನುಭವವಾಗುವುದೇ ಕರ್ಮಯೋಗಿ ಆಗುವುದಾಗಿದೆ. ಮೂಲ ಮಾತು- ಅನುಭವಿ ಸ್ವರೂಪರಾಗುವುದಾಗಿದೆ. ಒಂದೊಂದು ಗುಣದ ಅನುಭವದಲ್ಲಿ ಮುಳುಗಿಬಿಡಿ, ಶಕ್ತಿಸ್ವರೂಪರಾಗಿರಿ. ತಮ್ಮ ಸ್ವರೂಪದಿಂದ ಶಕ್ತಿಗಳು ಕಂಡುಬರಲಿ, ವರ್ತಮಾನದಲ್ಲಿಯೂ ಯಾರಲ್ಲಾದರೂ ಯಾವುದೇ ವಿಶೇಷ ಶಕ್ತಿಯಿದ್ದರೆ ಅವರಿಗಾಗಿ ಹೇಳುತ್ತೀರಿ- ಇವರು ಬಹಳ ಸಹನಶೀಲ ಸ್ವರೂಪರಾಗಿದ್ದಾರೆ. ಇವರಲ್ಲಿ ಸಮಾವೇಶ ಮಾಡಿಕೊಳ್ಳುವ ಶಕ್ತಿಯು ಬಹಳಷ್ಟು ಕಂಡುಬರುತ್ತದೆ. ಹಾಗಾದರೆ ಕೆಲವರಲ್ಲಿ ಕಾಣಿಸುತ್ತದೆ. ಕೆಲವರಲ್ಲಿ ಇಲ್ಲ ಮತ್ತು ಕೆಲವೊಮ್ಮೆ ಕಾಣಿಸುತ್ತದೆ. ಕೆಲವೊಮ್ಮೆ ಇಲ್ಲದಿದ್ದರೆ ಗಮನದ ಕೊರತೆಯಾಯಿತಲ್ಲವೆ. ಅಂದಮೇಲೆ ಪ್ರತಿಯೊಂದು ಶಕ್ತಿ. ಪ್ರತಿಯೊಂದು ಗುಣ. ಪ್ರತಿಯೊಂದು ಜ್ಞಾನರತ್ನಗಳು ತಮ್ಮ ಸ್ವರೂಪದಲ್ಲಿ ಅನುಭವ ಮಾಡಿರಿ, ಅದೂ ಸಹ ತಮಗೆ ಯಾವಾಗ ಅನುಭವವಾಗುವುದೋ ಆಗಲೇ ಸ್ವರೂಪದಲ್ಲಿ ಬರುವುದು. ತಾವು ಅನುಭವಿಯಾಗಿದ್ದರೆ, ಅನ್ಯರಿಗೂ ಸ್ವತಹವಾಗಿ ಅನುಭವವಾಗುವುದು. ಯಾವಾಗ ಅನುಭವ ಮಾಡುತ್ತಿರೋ ಆಗ ಎಷ್ಟು ಖುಷಿಯಾಗುವುದು- ಒಂದು

ಸೆಕೆಂಡಿಗಾದರೂ ಯಾವುದೇ ಗುಣ ಅಥವಾ ಶಕ್ತಿಯ ಅನುಭವವಾದರೆ ಎಷ್ಟೊಂದು ಖುಷಿ ಹೆಚ್ಚಾಗುತ್ತದೆ ಮತ್ತು ಸದಾ ಅನುಭವೀ ಸ್ವರೂಪರಾದಾಗ ಸದಾ ಚಹರೆಯಲ್ಲಿ ಖುಷಿಯ ಹೊಳಪು, ಭಾಗ್ಯಶಾಲಿಗಳ ಹೊಳಪಿನ ಅನುಭವವಾಗುವುದು ಅಂದಮೇಲೆ ಅನುಭವವನ್ನು ವೃದ್ಧಿ ಮಾಡಿಕೊಳ್ಳಿರಿ. ವಿಧಿಯ ಸ್ಪಷ್ಟತೆಯಂತೂ ಇದೆಯಲ್ಲವೇ? ಒಳ್ಳೆಯದು- ಎಲ್ಲರೂ ಭಾಗ್ಯಶಾಲಿಗಳಂತೂ ಅವಶ್ಯವಾಗಿ ಆಗಿದ್ದೀರಿ ಆದರೆ ವಿಶೇಷವಾಗಿ ಖುಷಿಯನ್ನಾಚರಿಸಲು ಬಂದಿದ್ದೀರಿ. ಅಂದಮೇಲೆ ಎಲ್ಲರಿಗೂ ಖುಷಿ ಸಿಕ್ಕಿದೆಯೇ?

ಎಲ್ಲರೂ ಆರಾಮವಾಗಿ ಇದ್ದೀರಾ? ಮನಸ್ಸಿನ ಆರಾಮದಲ್ಲಿದ್ದರೆ ತನುವಿಗೂ ಆರಾಮ ಸಿಕ್ಕಿಬಿಡುತ್ತದೆ. ಸ್ಥಾನವನ್ನೆಷ್ಟು ವಿಸ್ತಾರ ಮಾಡುತ್ತೀರೋ ಅಷ್ಟು ಕಡಿಮೆಯಾಗುತ್ತದೆ. ಇದಂತು ಪೂರ್ವನಿಶ್ಚಿತವಿದೆ. ಅದನ್ನೇನು ಮಾಡುವಿರಿ! ರಿಹರ್ಸಲ್ ಆಗಿಬಿಡುತ್ತದೆ. ಎಲ್ಲಿ ಕುಳ್ಳರಿಸಬೇಕು, ಹೇಗೆ ಕುಳ್ಳರಿಸಬೇಕು, ಹೇಗೆ ಮಲಗುವ ವ್ಯವಸ್ಥೆ ಮಾಡಬೇಕು- ಇದೆಲ್ಲದರ ರಿಹರ್ಸಲ್ ಆಗಿಬಿಡುತ್ತದೆ. ಅಂದಾಗ ಕೆಳಗೆ ಮಲಗುವುದು ಒಳ್ಳೆಯದು. ಪಟ್ಟದ ರಾಜರಾಗಿಬಿಟ್ಟಿರಲ್ಲವೆ. ಶಾಸ್ತ್ರಗಳಲ್ಲಂತು ಪಟ್ಟದರಾಜಾ ಮತ್ತು ಪಟ್ಟದ ರಾಣಿಯ ಬಹಳ ಮಹಿಮೆಯಿದೆ. ತಾವಂತು ಬಹಳ ಸಹಜವಾಗಿ ಆಗಿಬಿಟ್ಟಿದ್ದೀರಿ. ಏನಾದರೂ ಕಷ್ಟವಾಗುತ್ತಿದೆಯೇ? ಬಾಪ್‌ದಾದಾ ಹಾಗೂ ನಿಮಿತ್ತರಾಗಿರುವವರು ಇದೇ ಚಿಂತನೆ ಮಾಡುತ್ತಾರೆ- ಎಲ್ಲರೂ ಆರಾಮದಿಂದ ಇರಲಿ. ಆದರೆ ಹೆಚ್ಚಿನ ಸಂಖ್ಯೆಯಲ್ಲಿಯೂ ಆರಾಮವೆನಿಸುತ್ತದೆ ಎಂದರೆ ಖುಷಿಯ ಮಾತಾಗಿದೆ ಎಲ್ಲಿಯೇ ಇರಿ ಅಲ್ಲಿ ಖುಷಿಯಾಗಿದ್ದೀರಾ? ಕಷ್ಟವೇನೂ ಇಲ್ಲವೆ, ಇನ್ನಷ್ಟು ಮಕ್ಕಳನ್ನು ಕರೆಸಿದರೆ? ಯಾರು ಬೇಕಾದರೂ ಬರಬಹುದು- ಕೇವಲ ಈ ಒಂದು ಸೂಚನೆ ಹೋದರೂ ಬಂದುಬಿಡುತ್ತಾರೆ. ಅದಕ್ಕೆ ಏನು ಮಾಡಬೇಕು? ಅಖಂಡ ತಪಸ್ಸನ್ನು ಮಾಡಬೇಕಾಗುತ್ತದೆ. ಖುಷಿಯ ಔಷಧಿಯನ್ನು ಸೇವಿಸಿರಿ ಹಾಗೂ ಅಖಂಡ ಯೋಗ ಮಾಡಿದರೆ ಎಲ್ಲರೂ ಬಂದುಬಿಡಬಹುದು. ಮಾಡುವಿರಾ? ಸುಸ್ತಾಗುವುದಿಲ್ಲವೇ! ಹಸಿವಾಗುವುದಿಲ್ಲವೇ! ಏಳು ದಿನಗಳು ಆಹಾರ ಸೇವಿಸುವುದಿಲ್ಲವೇ? ಏಳು ದಿನಗಳು ಆಹಾರ ಸಿಗುವುದಿಲ್ಲ. ಬಾಪ್‌ದಾದಾರವರು ಇಂತಹ ಹಠ ಮಾಡಿಸುವುದನ್ನೂ ಬಯಸುವುದಿಲ್ಲ. ಸಹಜಯೋಗಿ ಆಗಿದ್ದೀರಲ್ಲವೆ.

ಪರಮಾತ್ಮನ ಮಿಲನದ ಭಾಗ್ಯವೂ ಕಡಿಮೆಯೇನಲ್ಲ! ಈ ಮಿಲನದ ಶ್ರೇಷ್ಠ ಭಾಗ್ಯವು ಕೋಟಿಯಲ್ಲಿ ಕೆಲವರು. ತಾವು ಆತ್ಮರಿಗಷ್ಟೇ ಸಿಗುತ್ತದೆ. ಒಳ್ಳೆಯದು- ಭೇಟಿಯಾದಿರಲ್ಲವೇ! ಭಕ್ತಿಯಲ್ಲಂತೂ ಜಡಚಿತ್ರದಿಂದ ಸಿಗುತ್ತದೆ ಮತ್ತು ಇಲ್ಲಿ ಚೈತನ್ಯದಲ್ಲಿ ತಂದೆಯು ಮಕ್ಕಳೊಂದಿಗೆ ಭೇಟಿಯೂ ಆಗುವರು. ಆತ್ಮಿಕ ವಾರ್ತಾಲಾಪವನ್ನೂ ಮಾಡುವರು, ಅಂದಾಗ ಈ ಭಾಗ್ಯವು ಕಡಿಮೆಯೇನು! ಆದರೂ ತಾವೆಲ್ಲರೂ ಅದೃಷ್ಟವಂತರು, ಸಮಯದ ಗತಿಯು ಬದಲಾಗುತ್ತದೆ. ಈಗಿನ್ನೂ ಆರಾಮದಿಂದ ಕುಳಿತು ಕೇಳುತ್ತಿದ್ದೀರಿ, ಮುಂದೆ ನಡೆದಂತೆ ವೃದ್ಧಿಯಾಗುತ್ತದೆ ಆಗ ಬದಲಾಗುತ್ತದೆ ಅಲ್ಲವೆ. ಆದರೂ ತಾವು ಅದೃಷ್ಟವಂತರು ಏಕೆಂದರೆ ಟೂ-ಲೇಟ್ ಸಮಯದಲ್ಲಿ ಬಂದಿಲ್ಲ. ಲೇಟಾಗಿ ಬಂದಿದ್ದೀರಿ. ಹಾಗಾದರೆ ಎಲ್ಲರೂ ಖುಷಿಯಾಗಿದ್ದೀರಾ? ಎಲ್ಲರಿಗಿಂತಲೂ ಹೆಚ್ಚು ಸಂತೋಷ ಯಾರಿಗಿದೆ ಒಳ್ಳೆಯದು ಯಾರಿಗಾದರೂ ಕಡಿಮೆ ಸಂತೋಷವಿದೆಯೇ ಕಡಿಮೆ ಸಂತೋಷ ಇರುವವರು ಕೈಯನ್ನು ಎತ್ತಿ. ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ಸರ್ವಶ್ರೇಷ್ಠ ಭಾಗ್ಯ ವಿಧಾತಾನ ಭಾಗ್ಯಶಾಲಿ ಆತ್ಮರಿಗೆ, ಸದಾ ಮನಜೀತ್- ಜಗತ್‌ಜೀತ್ ಎಂಬ ನಿಶ್ಚಯ ಹಾಗೂ ನಶೆಯಲ್ಲಿರುವ, ಸದಾ ಪ್ರತಿಯೊಂದು ಗುಣ, ಶಕ್ತಿ ಹಾಗೂ ಜ್ಞಾನದ ಅನುಭವಿ ಆತ್ಮರಿಗೆ, ಸದಾ ತಂದೆಯನ್ನು**

**ಜೊತೆಯಿಟ್ಟುಕೊಳ್ಳುವ(ಸಂಗದಲ್ಲಿರುವ) ಕಂಬೈಂಡ್ ಸ್ವರೂಪ ಅತ್ಮರಿಗೆ ಸದಾ ಶ್ರೇಷ್ಠ ಭಾಗ್ಯದ ರೇಖೆಯನ್ನು ಸಹಜವಾಗಿ ಶ್ರೇಷ್ಠವನ್ನಾಗಿ ಮಾಡಿಕೊಳ್ಳುವ, ಇಂತಹ ಅತ್ಯಂತ ಸಮೀಪ ಹಾಗೂ ಶ್ರೇಷ್ಠವಾದ ಆತ್ಮರಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 17-11-1994.

***ಪ್ರತಿಯೊಂದು ಗುಣ ಅಥವಾ ಶಕ್ತಿಯ ಅನುಭವದಲ್ಲಿ ಮುಳುಗಿಬಿಡುವುದು ಅರ್ಥಾತ್ ಅದೃಷ್ಟವಂತರಾಗುವುದು.***

ಕರ್ಮದಲ್ಲಿ ಯೋಗದ ಅನುಭವವಾಗುವುದೇ ಕರ್ಮ ಯೋಗಿ ಆಗುವುದಾಗಿದೆ. ಮೂಲ ಮಾತು ಅನುಭವಿಸುವ ಸ್ವರೂಪರಾಗುದಾಗಿದೆ. ಒಂದೊಂದು ಗುಣದ ಅನುಭವದಲ್ಲಿ ಮುಳುಗಿಬಿಡಿ, ಶಕ್ತಿ ಸ್ವರೂಪರಾಗಿರಿ ತಮ್ಮ ಸ್ವರೂಪದಿಂದ ಶಕ್ತಿಗಳು ಕಂಡು ಬರಲಿ ವರ್ತಮಾನದಲ್ಲಿಯೂ ಯಾವುದೇ ವಿಶೇಷ ಶಕ್ತಿ ಯಾರಲ್ಲಾದರೂ ಕಾಣಿಸಿದಾಗ ಇವರು ಬಹಳ ಸಹನಶೀಲ ಸ್ವರೂಪರಾಗಿದ್ದಾರೆ,ಇವರಲ್ಲಿ ಸಮಾವೇಶ ಮಾಡಿಕೊಳ್ಳುವ ಶಕ್ತಿಯು ಬಹಳಷ್ಟಿದೆ ಎಂದು ಹೇಳುತ್ತೀರಿ. ಪ್ರತಿಯೊಂದು ಶಕ್ತಿ, ಪ್ರತಿಯೊಂದು ಗುಣ, ಪ್ರತಿಯೊಂದು ಜ್ಞಾನ ರತ್ನಗಳನ್ನು ತಮ್ಮ ಸ್ವರೂಪದಲ್ಲಿ ಅನುಭವ ಮಾಡಿರಿ, ಯಾವಾಗ ಸ್ವಯಂ ಅನುಭವ ಮಾಡುವಿರೋ ಆಗಲೇ ಸ್ವರೂಪದಲ್ಲಿ ಕಂಡು ಬರುವುದು. ಆಗಲೇ ಅನ್ಯರಿಗೂ ಸ್ವತಃವಾಗಿ ಅನುಭವವಾಗುವುದು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಪರಮಾತ್ಮನ ಪ್ರೀತಿಯಲ್ಲಿ ಲೀನವಾಗಿ ಅನೇಕ ದುಃಖಗಳನ್ನು ಮರೆತು ಸುಖದ ಉಯ್ಯಾಲೆಯಲ್ಲಿ ತೂಗುತ್ತಿದ್ದೇನೆ.

2. ನಾನು ಸಂಗಮಯುಗದಲ್ಲಿ ಶ್ರೇಷ್ಠ ಭಾಗ್ಯ ವಿಧಾತನಾದ ಪರಮಾತ್ಮನಿಂದ ಭಾಗ್ಯದ ರೇಖೆಯನ್ನು ಎಳೆಯಿಸಿಕೊಂಡಿರುವ ಶ್ರೇಷ್ಠ ಭಾಗ್ಯಶಾಲಿ.

3. ನಾನು ಈ ಸಂಗಮ ಯುಗವೆಂಬ ಸ್ವಲ್ಪ ಸಮಯದಲ್ಲಿ ಅಭ್ಯಾಸದ ಮೇಲೆ ಗಮನವಿಟ್ಟು ಮೊದಲ ನಂಬರ್ ನಲ್ಲಿ ಬಂದಿರುವ ದೃಢ ನಿಶ್ಚಯ ಬುದ್ಧಿ ಸ್ವರೂಪ.

4. ನಾನು ಮಾಸ್ಟರ್ ಜ್ಞಾನಸ್ವರೂಪನಾಗಿ ಪ್ರತಿಯೊಂದು ಕರ್ಮವನ್ನು ಆಚರಿಸಿದ್ದೇನೆ.

5. ನಾನು ಸದಾ ತಂದೆಯೊಂದಿಗೆ ಕಂಬೈನ್ಡ್ ಸ್ವರೂಪದಲ್ಲಿದ್ದೇನೆ.

6. ನಾನು ಬಲಹೀನತೆ ಎಂಬ ಮಾಯೆಯ ಮೇಲೆ ಬಹಳಷ್ಟು ಸಾರಿ ವಿಜಯವನ್ನು ಪಡೆದಿರುವ ಮನ್ ಜೀತ್, ಜಗತ್ಜೀತ್ ಸ್ವರೂಪ.

7. ನಾನು ಸ್ವಯಂನ ಕರ್ಮೇಂದ್ರಿಯಗಳು ಮತ್ತು ಮನಸ್ಸು, ಬುದ್ಧಿ, ಸಂಸ್ಕಾರಗಳ ಮೇಲೆ ವಿಜಯೀ ಆಗಿರುವ ಸ್ವರಾಜ್ಯಾಧಿಕಾರಿ, ವಿಶ್ವರಾಜ್ಯಾಧಿಕಾರಿ.

8. ನಾನು ಪ್ರತಿಯೊಂದು ಗುಣ, ಶಕ್ತಿ, ಜ್ಞಾನದ ಬಿಂದುಗಳ ಅನುಭವವನ್ನು ಮಾಡುವ ಅನುಭವೀಮೂರ್ತಿ.

9. ನಾನು ನಡೆದಾಡುತ್ತಾ, ಸುತ್ತಾಡುತ್ತಾ ಪ್ರತಿಯೊಂದು ಗುಣ, ಶಕ್ತಿ, ಜ್ಞಾನವನ್ನು ಪುನರಾವರ್ತನೆ ಮಾಡಿ ಅನುಭವ ಮಾಡಿಕೊಳ್ಳುವ ಕರ್ಮಯೋಗಿ.

10. ನಾನು ಕರ್ಮ ಮಾಡುತ್ತಾ ಯೋಗವನ್ನು ಅನುಭವ ಮಾಡಿಕೊಳ್ಳುವ ಕರ್ಮಯೋಗಿ.

11. ನಾನು ಒಂದೊಂದು ಗುಣದ ಅನುಭವದಲ್ಲಿ ಮುಳುಗಿ ಅನುಭವಿ ಸ್ವರೂಪವಾಗಿ, ಶಕ್ತಿ ಸ್ವರೂಪವಾಗುವ ಮಾಸ್ಟರ್ ಸರ್ವಶಕ್ತಿವಂತನು.

12. ನಾನು ಸ್ವಯಂ ಪ್ರತಿಯೊಂದು ಗುಣದ, ಶಕ್ತಿಯ, ಜ್ಞಾನದ ಅನುಭವೀ ಸ್ವರೂಪವಾಗಿ ಸಂತೋಷವನ್ನು ಅದೃಷ್ಟವನ್ನು ಅನುಭವ ಮಾಡಿದ್ದೇನೆ.